ಸಂಬಂಧಪಟ್ಟವರಾದರೆ ಒಂದು ಕಾನೂನು ಸಾಮಾನ್ಯ ಜನಕ್ಕಾದರೆ ಮತ್ತೊಂದು ಕಾನೂನು, ಇದರ ಪ್ರತಿಫಲವನ್ನು ಮುಂದೆ ಇವರೂ ಕೂಡ ಉಣ್ಣುತ್ತಾರೆ ಅಂತ ಎಚ್ಚರಿಕೆ ಹೇಳಿ ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತಿದ್ದೇವೆ.

(ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗಿನ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷದಿಂದ ಬಹುಶಃ ಇದಕ್ಕಿಂತ ಹೆಚ್ಚಿನದೇನನ್ನೂ ನಾನು ನಿರೀಕ್ಷೆ ಮಾಡಲಾರೆ. ಒಂದು ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ. ಇಷ್ಟೆಲ್ಲಾ ಬೆಟ್ಟ ಅಗೆದರೂ ಏನೂ ಪ್ರಯೋಜನವಾಗಲಿಲ್ಲ. ಬೈರೇಗೌಡರು ಈಗಾಗಲೇ ಹೇಳಿದಂತೆ ಬಹುಶಃ ಇದು ಒಳ್ಳೆಯದಲ್ಲ. ನಾನು ಆಗಲೇ ಹೇಳಿದ್ದೇನೆ. ಇಲ್ಲಿ ರಮೇಶ್ ಅವರು ಇದ್ದಾರೆ, ಮಂಜುನಾಥರವರು ಇದ್ದಾರೆ ಅಥವಾ ಪೀಠದಲ್ಲಿರುವ ಅಧ್ಯಕ್ಷರಿದ್ದಾರೆ, ಅದು ಅಷ್ಟು ಮುಖ್ಯವಲ್ಲ. ನಾನು ಆಗಲೇ ಹೇಳಿದೆ; ನಾನು ಅವರನ್ನು ಕುಣಿಗಲ್ ಚುನಾವಣೆಯಲ್ಲಿ ನೋಡಲಿಲ್ಲ. ಒಂದು ದಿವಸ ಯಾವುದೋ ಒಂದು ದೇವಸ್ಥಾನದ ಹತ್ತಿರ ನೋಡಿದ್ದೇನೆ ಅಷ್ಟೆ ಪ್ರಶ್ನೆ ಅದಲ್ಲ. ಈ ಸರ್ಕಾರದ ಬಗ್ಗೆ ಜನರಲ್ಲಿ ನಂಬಿಕೆ ಬರಬೇಕಾದರೆ, ಕಾನೂನಿನ ಬಗ್ಗೆ ವಿಶ್ವಾಸ ಹುಟ್ಟಬೇಕಾದರೆ, ನೀವು ಈ ಕೆಲಸ ಮಾಡಬೇಕಾದ್ದು ನಿಮ್ಮ ಅದ್ಯ ಕರ್ತವ್ಯ ಇತ್ತು. ಆ ಕರ್ತವ್ಯವನ್ನು ಪರಿಪಾಲನೆ ಮಾಡುವುದಕ್ಕೆ ನೀವು ಒಪ್ಪುತ್ತಿಲ್ಲವಾದ್ದರಿಂದ ಅದನ್ನು ಪ್ರತಿಭಟಿಸುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಶ್ರೀ ವೈ.ಕೆ. ರಾಮಯ್ಯನವರು ಸದನದಿಂದ ಸಭಾತ್ಯಾಗ ಮಾಡಿದರು ಮತ್ತು ಈಗಾಗಲೇ ಸಭಾತ್ಯಾಗ ಮಾಡಿದ್ದ ಶ್ರೀ ಬೈರೇಗೌಡರು ಪುನಃ ಪೀಠಕ್ಕೆ ಬಂದು ಕುಳಿತರು).

ಅಧ್ಯಕ್ಷರು : ಬೈರೇಗೌಡರೇ, ಕೆಲವು ಪ್ರಕ್ರಿಯೆಗಳನ್ನು ಆಯಾ ಕಾಲಕ್ಕೆ ಮಾಡದೆ ಹೋದರೆ ಎಂತಹ ಅನಾಹುತವಾಗುತ್ತದೆ ಎನ್ನುತಕ್ಕಂಥಾದ್ದಕ್ಕೆ ನೀವು ಹಾಗೂ ಶ್ರೀ ರಾಮಯ್ಯನವರು ಉದಾಹರಣೆ. ನೀವೇನೋ ಸಭಾತ್ಯಾಗ ಮಾಡಿ ಹೋದಿರಿ, ಆಗ ರಾಮಯ್ಯನವರು ನಿಮ್ಮನ್ನು ಹಿಂಬಾಲಿಸಬೇಕಾಗಿತ್ತು. ಅಷ್ಟರಲ್ಲಿ ನೀವು ವಾಪಸ್ಸು ಬಂದಿರಿ, ಅವರು ಹೊರಗೆ ಹೋಗಿದ್ದಾರೆ. ಆದುದರಿಂದ, this has some serious implications. This is a lesson for everyone of this House. Whatever should happen, should happen at a given point of time.

ಶ್ರೀ ಸಿ. ಬೈರೇಗೌಡ : (ವೇಮಗಲ್) ವಿಷಯ : ಹಾಲು ಉತ್ಪಾದಕರಿಗೆ ಪಾಲಿನ ಬೆಲೆಯನ್ನು ಹೆಚ್ಚಿಗೆ ನೀಡುವ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರೇ, ನಾನು ವಾಪಸ್ಸು ಬಂದ ಕಾರಣವೇನೆಂದರೆ, ಕೆಲವು ಗುರುತರವಾದಂಥ ವಿಚಾರ ಅಲ್ಲಿಗೆ ಮುಕ್ತಾಯವಾಯಿತೆಂದು ನನ್ನ ಭಾವನೆ. ಅಲ್ಲದೆ, ನಾನು ಬೇರೆ ಕೆಲವು ಗುರುತರವಾಗಿರತಕ್ಕಂಥ ವಿಚಾರಗಳನ್ನು ಸಹ ಪ್ರಸ್ತಾಪಿಸಬೇಕಾಗಿದೆ. ಇವೊತ್ತು ಅಧಿವೇಶನದ ಕೊನೆಯ ದಿವಸವೆಂದು ನಾನು ಅಂದುಕೊಂಡಿದ್ದೇನೆ. ನಾವು ಹೊರಗಡೆ ಹೋದಾಗ ತಾವು ಅಕಸ್ಮಾತ್ ನನ್ನ ಹೆಸರನ್ನು ಕರೆದರೆ, ಆಗ ನಾನು ಸದನದಲ್ಲಿ ಇಲ್ಲದಿದ್ದರೆ ನಾನು ಆಗ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ಆ ದೃಷ್ಟಿಯಿಂದ ನಾನು ಪುನಃ ವಾಪಸ್ಸು ಬಂದೆನೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ಈ ಸದನ ಪ್ರಾರಂಭವಾದಾಗ ಅವೊತ್ತೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ, ಇವೊತ್ತು ಸಹ ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇವೊತ್ತಿನ ದಿವಸ ಸದನದಲ್ಲಿದ್ದಾರೆ. ನನ್ನದು ಮೂರು ವಿಚಾರಗಳಿವೆ. ಮೊದಲನೆಯದಾಗಿ, ಇವೊತ್ತು ಹಾಲು ಉತ್ಪಾದಕರ ಮಹಾ ಮಂಡಲಿ ಹಾಲಿನ ಬೆಲೆಯನ್ನು ಹೆಚ್ಚಿಸತಕ್ಕಂಥ ತೀರ್ಮಾನಕ್ಕೆ ಬಂದಿದೆ. ಇದರ ಬಗ್ಗೆ ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಾಲು ಉತ್ಪಾದಕರ ಮಹಾಮಂಡಳಿಯವರು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದ ಅಥವಾ ಮಾಡುತ್ತದೆ ಅಥವಾ ಇಲ್ಲವೇ ಎನ್ನುತಕ್ಕಂಥ ಮಾತನ್ನು ಇವೊತ್ತು ತಿಳಿಸಬೇಕು. ಕಾರಣವೇನೆಂದರೆ ಇವೊತ್ತಿನ ದಿವಸ ಹಾಲಿನ ಉತ್ಪಾದನೆ ಕಡಿಮೆಯಾಗುತ್ತಿದೆ. ಇದರ ಬಗ್ಗೆ ನಾವು ಹೇಳಬೇಕಾಗಿಲ್ಲ, ಆಂಕಿ–ಅಂಶಗಳೇ ತೋರಿಸುತ್ತವೆ. ಇದಕ್ಕೆ ಕಾರಣವೇನೆಂದರೆ ಇವೊತ್ತಿನ ದಿವಸ ಹಾಲು ಉತ್ಪಾದಕರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಸರಿಯಾದಂಥ ಬೆಲೆ

ಉತ್ಪಾದಕರಿಗೆ ತಾವು ಏನು ಹೇಳುತ್ತೀರಿ ಎನ್ನುವ ಮಾತು ಅವರಿಗೆ ಮುಟ್ಟಬೇಕಾಗಿದೆ. ದಯಮಾಡಿ ಮುಖ್ಯಮಂತ್ರಿಗಳು ಅದನ್ನು ತಿಳಿಸಬೇಕು.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು).

ಶ್ರೀ ಆರ್.ಎಲ್. ಜಾಲಪ್ಪ : (ದೊಡ್ಡಬಳ್ಳಾಪುರ) ಮಾನ್ಯ ಅಧ್ಯಕ್ಷರೇ, ನನ್ನ ಅನುಭವದಲ್ಲಿ ಇದು ಒಂದು ಬಹಳ ಜ್ವಾಲಂತ ಪ್ರಶ್ನೆ. ಸ್ವತಃ ನಾನೇ ಒಂದು ದಿನಕ್ಕೆ 250 ಲೀಟರ್ ಹಾಲನ್ನು ಕೊಡುತ್ತೇನೆ. ಅದರಲ್ಲಿ ಒಂದು ರೂಪಾಯಿಯ ಲಾಭ ಕೂಡ ಸಿಕ್ಕುವುದಿಲ್ಲ. ಬರೇ ಸಗಣಿ ಮಾತ್ರ ಉಳಿಯುತ್ತದೆ. ಅದನ್ನು ಬಿಟ್ಟರೆ ಬೇರೆ ಏನೂ ಸಿಕ್ಕುವುದಿಲ್ಲ. ಈ ರೀತಿ ಇದ್ದರೆ ರೈತ ಎಷ್ಟು ದಿನಗಳು ತಾನೆ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ ನೀವೇ ಹೇಳಿ? ತಮಗೆ ಗೊತ್ತಿದೆ, ಈ ರಾಜ್ಯದಲ್ಲಿ ಬೂಸಾದ ಬೆಲೆ ಜಾಸ್ತಿಯಾಯಿತು, ಹಿಂಡಿಯ ಬೆಲೆ ಜಾಸ್ತಿಯಾಯಿತು, ಹಸುಗಳನ್ನು ಸಾಕುವ ಕೂಲಿ ಜಾಸ್ತಿಯಾಯಿತು. ಪ್ರತಿಯೊಂದು ವಸ್ತುಗಳ ಬೆಲೆಗಳೂ ಕೂಡ ಜಾಸ್ತಿಯಾಗಿದೆ. ಹೀಗಿರುವಾಗ ತಾವು ಹಾಲಿನ ಬೆಲೆಯನ್ನು ಜಾಸ್ತಿ ಮಾಡುವುದಿಲ್ಲವೆಂದರೆ ಹೇಗೆ? ನಾವು ಆ ಉದ್ಯಮವನ್ನು ನಡೆಸುವುದು ಹೇಗೆ? ಅಥವಾ ಬೆಲೆಯನ್ನು ಜಾಸ್ತಿ ಮಾಡುವುದಿಲ್ಲವೆಂದರೆ ಹೇಳಿ ಈಗಾಗಲೇ ಅರ್ಧಂಬರ್ಧ ಹಸುಗಳನ್ನು ಬೇರೆ ರಾಜ್ಯಗಳಿಗೆ ಮಾರಿಕೊಂಡಿದ್ದೇವೆ. ಉಳಿದಿರತಕ್ಕ ಹಸುಗಳನ್ನು ಸಹ ಮಾರಿಬಿಡುತ್ತೇವೆ. ನನ್ನ ಹತ್ತಿರವೇ 38 ಹಸುಗಳಿದ್ದವು; ಅದರಲ್ಲಿ ಆ ಕಾರಣದಿಂದಲೇ 14 ಹಸುಗಳನ್ನು ಮಾರಿದ್ದೇನೆ. ನೀವು ಹಾಲಿನ ಬೆಲೆಯನ್ನು ಜಾಸ್ತಿ ಮಾಡುವುದಿಲ್ಲವೆಂದರೆ ಅವುಗಳನ್ನು ಕೂಡಾ ಮಾರಿಬಿಡುತ್ತೇನೆ. ನಮ್ಮ ಕಷ್ಟವನ್ನು ದಯಮಾಡಿ ಸ್ವಲ್ಪ ಅರ್ಥಮಾಡಿಕೊಳ್ಳಿ. ಹಸುಗಳೇನೂ ಮೆಷಿನ್ ಅಲ್ಲ. ಅವುಗಳಿಂದ ಹಾಲನ್ನು ಕರೆಯಬೇಕಾದರೆ ಬೂಸ, ಹಿಂಡಿ, ಹಸಿ ಹುಲ್ಲು ಮುಂತಾದ ಪ್ರತಿಯೊಂದನ್ನೂ ಹಾಕಿದರೆ ಮಾತ್ರ ಸಾಧ್ಯ. ಅದೇನೂ ಫ್ಯಾಕ್ಟರಿಯಲ್ಲಿರುವ ಮೆಷಿನ್ ರೀತಿಯಲ್ಲ. ದಯಮಾಡಿ ತಾವು ವಿದೇಶಕ್ಕೆ ಹೋಗುವ ಮೊದಲು ನಾವೇನು ಒಂದೂವರೆ ರೂಪಾಯಿ ಹಾಲಿನ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಕೇಳುತ್ತಿದ್ದೇವೋ ಅದಕ್ಕೆ ಒಪ್ಪಿಗೆ ಕೊಟ್ಟು ಹೋಗಿ. ದೇವರು ನಿಮಗೆ ವಿದೇಶದ ಪ್ರವಾಸದಲ್ಲಿ ಶುಭ ಕೊಡುತ್ತಾನೆ. ದಯಮಾಡಿ ಇದನ್ನು ಒಪ್ಪಿಕೊಂಡು ವಿದೇಶಕ್ಕೆ ಹೋಗಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನನಗೆ ಅವರು ಹೇಳುವುದು ಅರ್ಥವಾಗುತ್ತಿಲ್ಲ. ಅವರಿಗೆ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿ ವಿದೇಶಕ್ಕೆ ಹೋದರೆ ನಮಗೆ ಎಂಥ ಅಪಚಾರವಾಗುತ್ತದೋ ಎಂದು ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಎಸ್.ಜಿ. ಕೌಜಲಗಿ : ಬಂಗಾರಪ್ಪನವರು ವಿದೇಶಕ್ಕೆ ಹೋಗುವಾಗ ಒಂದು ರೂಪಾಯಿ ಬೆಲೆಯನ್ನು ಹೆಚ್ಚು ಮಾಡಿಸೋದರು ಎಂದು ಎಲ್ಲ ರೈತರು ನಿಮಗೆ ಶುಭವನ್ನು ಹಾರೈಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ : ಬಹಳ ಹಿಂದೆ ಈ ವಿಚಾರದಲ್ಲಿ ಒಂದು ರೂಪಾಯಿ ಬೆಲೆ ಜಾಸ್ತಿಯಾಗಿತ್ತು. ಆನಂತರ ಮತ್ತೆ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ರೈತರು ಬೇಡಿಕೆ ಇಟ್ಟ ಎನ್ನತಕ್ಕದ್ದನ್ನು ಮಾಜಿ ಪ್ರೈಮ್‌ಮಿನಿಸ್ಟರು, ಜಾಲಪ್ಪನವರು ಮತ್ತು ಉಳಿದಿರತಕ್ಕವರು ಕೂಡ ಅನೇಕ ಸಲ ಆ ವಿಷಯವನ್ನು ಪ್ರಸ್ತಾಪ ಮಾಡತಕ್ಕ ಪ್ರಯತ್ನವನ್ನು ಮಾಡಲಿದ್ದಾರೆಂದು ನನಗೆ ಗೊತ್ತಿದೆ. ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗಿದೆ ಎನ್ನತಕ್ಕ ವಿಚಾರ ಸರ್ಕಾರದ ಗಮನದಲ್ಲಿದೆ. ಕೆ.ಎಂ.ಎಫ್.ನವರು, ಹಾಲು ಒಕ್ಕೂಟದ ಮಹಾಮಂಡಲಿಯವರು ಸರ್ಕಾರ ಒಪ್ಪಿದರೆ ನಾವು ಹಾಲಿನ ಬೆಲೆಯನ್ನು ಜಾಸ್ತಿ ಮಾಡುತ್ತೇವೆ ಎನ್ನತಕ್ಕ ಏನು ಒಂದು ತೀರ್ಮಾನವನ್ನು ಮಾಡಿದ್ದಾರೆ. ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಎಲ್ಲಾವುಗಳ ಬೆಲೆ ಜಾಸ್ತಿಯಾಗಿರತಕ್ಕದ್ದು ನಿಜ. ಆದರ ಬಗ್ಗೆ ಯಾರೂ ವ್ಯಾಖ್ಯಾನ ಕೊಡುತ್ತಿಲ್ಲ. ಆ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾಗಿರತಕ್ಕ ತೀರ್ಮಾನವನ್ನು ಆದಷ್ಟು ಶೀಘ್ರದಲ್ಲಿಯೇ ಮಾಡುತ್ತೇವೆ. ಅದರ ಪ್ರವಾಸಕ್ಕೆ ಹೋಗುವುದಕ್ಕಿಂತ ಮೊದಲೇ ಅಥವಾ ಹೋದಾಗ ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ನಾನು ಇಲ್ಲದಿದ್ದರೂ ಅದನ್ನು ತೀರ್ಮಾನ ಮಾಡಲು ಸಂಬಂಧಪಟ್ಟ ಸಚಿವರು ಇದ್ದಾರೆ. ಅವರ ಹತ್ತಿರ ನಾನು ಮಾತನಾಡುತ್ತೇನೆ.

ಸಿಗದಿರುವ ಕಾರಣ ಅನೇಕ ಹಾಲು ಉತ್ಪಾದಕರು ತಮ್ಮ ಹಸುಗಳನ್ನು ಪಕ್ಕದ ರಾಜ್ಯಗಳವರಿಗೆ ಮಾರಾಟ ಮಾಡುತ್ತಿದ್ದಾರೆಂಬ ಮಾತನ್ನು ಸತತವಾಗಿ ಹೇಳಿದ್ದೇನೆ. ಮಾನ್ಯ ಶ್ರೀ ಬಸವಲಿಂಗಪ್ಪನವರು ಇವೊತ್ತಿನ ದಿವಸ ಸದನದಲ್ಲಿ ಕುಳಿತಿದ್ದಾರೆ. ಅವರು ಮಂತ್ರಿಗಳಾಗಿದ್ದಾಗ ಅವರಿಗೆ ನಾನು ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೆ. ಏನೆಂದರೆ ಮುಂದೆ ಈ ರಾಜ್ಯದಲ್ಲಿ ಹಾಲಿನ ಬರವನ್ನು ಎದುರಿಸಬೇಕಾಗುತ್ತದೆ ಎಂದು; ಆದ್ದರಿಂದ, ನೀವು ಈಗಲೇ ಹಾಲಿನ ಬೆಲೆಯನ್ನು ಏರಿಸಬೇಕೆಂಬ ಮಾತನ್ನು ಹೇಳಿದ್ದೆ. ಅವರು ಆಗ 3–6 ತಿಂಗಳುಗಳಾದ ಬಳಿಕ ಹಾಲಿನ ಬೆಲೆಯನ್ನು ಏರಿಸಿದರು. ಈಗ ಪರಿಸ್ಥಿತಿ ಮತ್ತಷ್ಟು ಭೀಕರವಾದ ಮಟ್ಟವನ್ನು ಮುಟ್ಟಿದೆ. ಕಾರಣವೇನೆಂದರೆ, ಮಳೆಗಾಲ ಪ್ರಾರಂಭವಾದರೂ ಕೂಡ ಹಾಲಿನ ಸರಬರಾಜಿನ ಇಳುವರಿ ಇವೊತ್ತು ಕಡಿಮೆಯಾಗುತ್ತಿದ್ದು, ಇನ್ನು ಕೆಲವು ದಿವಸಗಳು ಕಳೆದ ನಂತರ ಕರ್ನಾಟಕ ರಾಜ್ಯದಲ್ಲಿ ಹಾಲು ಸಿಕ್ಕದೇ ಇರತಕ್ಕ ಪರಿಸ್ಥಿತಿ ಬರುತ್ತದೆ. ಆದುದರಿಂದ, ಈಗಲೇ ನೀವು ಎಚ್ಚೆತ್ತುಕ್ಕೊಂಡು ಕ್ರಮ ಕೈಗೊಳ್ಳಬೇಕು. ಮೊದಲನೆಯದಾಗಿ, ಹಾಲಿನ ಬೆಲೆಯನ್ನು ತಕ್ಷಣದಿಂದ ಹೆಚ್ಚಿಸಬೇಕು. ಎರಡನೆಯದಾಗಿ, ಹುಲ್ಲಿನ ಬೆಲೆಯನ್ನು ಹೆಚ್ಚಿಸಿದ ತರುವಾಯ ಪಶು ಆಹಾರದ ಬೆಲೆಯನ್ನು ಕೂಡ ವರ್ತಕರು ಹೆಚ್ಚಿಸುತ್ತಾರೆ. ಆದುದರಿಂದ, ಅದನ್ನು ಎಸೆನ್ಷಿಯಲ್ ಕಮಾಡಿಟೀಸ್ ಆಕ್ಟ್ ಪ್ರಕಾರ ಡಿಕ್ಲೇರ್ ಮಾಡಿ ಸರ್ಕಾರ ಅದನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕು. ಹಾಲು ಮತ್ತು ಮೇವು ಹತೋಟಿಯಲ್ಲಿದ್ದರೆ, ಹಾಲಿನ ಬೆಲೆಯನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಹಾಲನ್ನು, ಮೇವನ್ನು ಹತೋಟಿಯಲ್ಲಿಡದೆ ಬೆಲೆಯನ್ನು ಹತೋಟಿಯಲ್ಲಿಡುತ್ತೇವೆಂದರೆ ಅದು ಸಾಧ್ಯವಾದುದಲ್ಲ. ಆದುದರಿಂದ, ಸರ್ಕಾರ ಇದರ ಬಗ್ಗೆ ಏನು ಹೇಳುತ್ತದೆ ಎನ್ನತಕ್ಕಂಥಾದ್ದು ಮುಖ್ಯಮಂತ್ರಿಗಳು ಇವೊತ್ತಿನ ದಿವಸ ಹೇಳಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಕೆ.ಎಂ.ಎಫ್.ನವರಿಗೆ ಆಟೊನಮಿ ಕೊಟ್ಟು ಅವರು ಬೋರ್ಡ್ ನಿರ್ಣಯಗಳನ್ನು ತೆಗೆದುಕೊಂಡರೂ ಹಾಗೇ ಏಕೆ ಮಧ್ಯೆ ಹೋಗಿ ಹಾಲಿನ ಧಾರಣೆ ಹೆಚ್ಚು ಮಾಡಬಾರದು ಅಥವಾ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಏತಕ್ಕೆ ಸರ್ಕಾರ ಇಂಟರ್‌ಫಿಯರ್ ಆಗುತ್ತಿದೆ ಎಂಬುದರ ಬಗ್ಗೆ ಒಂದು ಉತ್ತರ ಹೇಳಬೇಕು. ಏಕೆಂದರೆ, ಸರ್ಕಾರದ ಆದೇಶ ಆಗಿದೆ. ಕೆಎಂಎಫ್ ಆಟೊನಮಸ್ ಬಾಡಿ ಎಂದು ಅವರಿಗೆ ಇವೊತ್ತು ಯಾವುದೇ ನಷ್ಟವನ್ನು ಸರ್ಕಾರ ತುಂಬಿಸಿಕೊಡುತ್ತಿಲ್ಲ. ಅದೇ ರೀತಿ ಯಾವುದೇ ಆಡಳಿತ ಖರ್ಚನ್ನು ತುಂಬಿಸಿಕೊಡುತ್ತಿಲ್ಲ. ಹಾಲಿನ ಧಾರಣೆ ನಿಗದಿ ಮಾಡುವ ಕಡೆ ಸರ್ಕಾರ ಏಕೆ ಕೈಹಾಕುತ್ತಿದೆ ಎಂಬುದನ್ನು ಹೇಳಿ, ಇದರ ಬಗ್ಗೆ ಮೊದಲು ತೀರ್ಮಾನವನ್ನು ತಾವು ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಇದನ್ನು ಮುಖ್ಯಮಂತ್ರಿಗಳೇ ತೀರ್ಮಾನ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಬಸವರಾಜ್ ಪಾಟೀಲ್‌ರವರು ಬೇಕಾದರೆ ಇದರ ಬಗ್ಗೆ ಒಂದು ಮೀಟಿಂಗ್‌ನ್ನು ಕರೆಯುತ್ತಾರೆ. ಅಲ್ಲಿ ತೀರ್ಮಾನ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದರ ಬಗ್ಗೆ ಕೆ.ಎಂ.ಎಫ್. ನವರು ಒಂದು ತೀರ್ಮಾನವನ್ನು ಮಾಡಿದ್ದಾರೆ. ಅವರು ಇನ್ನೂ ಮುಂದು ಹೋಗಿ ಏನು ಹೇಳಿದ್ದಾರೆಂದರೆ : ಕೆ.ಎಂ.ಎಫ್.ನ ಅಧ್ಯಕ್ಷರಾಗಿರತಕ್ಕ ಶ್ರೀಮಾನ್ ಬಚ್ಚೇಗೌಡರು ಮುಖ್ಯಮಂತ್ರಿಗಳ ಜೊತೆ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇವೆ, ಅವರಿಗೆ ಇದನ್ನು ಒಪ್ಪಿಸಿ ಅನಂತರ ಜಾರಿಗೆ ತರುತ್ತದೆ. ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಏನನ್ನು ಹೇಳುತ್ತಾರೆ ಪಾಪ ! ಅದರಲ್ಲಿ ಸಿಂಪತೈಸ್ ಮಾಡಿಕೊಳ್ಳುತ್ತೇನೆಂದು ಹೇಳಿದರು. ಅದನ್ನು ಹೇಳಬೇಕಾಗಿರತಕ್ಕವರು ಮುಖ್ಯಮಂತ್ರಿಗಳು. ಮುಖ್ಯಮಂತ್ರಿಗಳ ಪ್ರಕಾರ ಅವರು 4–5 ದಿನಗಳ ನಂತರ ವಿದೇಶಕ್ಕೆ ಹೋಗುತ್ತಾರೆ. ಅವರು ಹೋಗುವುದರೊಳಗೆ ಹಾಲಿನ ಬೆಲೆಯನ್ನು ಹೆಚ್ಚು ಮಾಡದಿದ್ದರೆ ಇಲ್ಲಿ ಅನಾಹುತವಾಗುತ್ತದೆ. ಆದುದರಿಂದ ಅವರು ಹೊರದೇಶಕ್ಕೆ ಹೋಗುವ ಮೊದಲು ಈ ರಾಜ್ಯದ ರೈತರಿಗೆ, ಹಾಲು

ನನಗೆ ಅವರ ಜೊತೆ ಮಾತನಾಡಲು ಇನ್ನೂ ಆಗಿಲ್ಲ. ದಯಮಾಡಿ ತಾವು ಅದನ್ನು ಅರ್ಥಮಾಡಿಕೊಳ್ಳುತ್ತೀರೆಂದು ಭಾವಿಸುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ : (ಬೈಲಹೊಂಗಲ) ವಿಷಯ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ : ಇವತ್ತಿನ ದಿನ ಬೆಳಗಾಂ ಜಿಲ್ಲೆಯ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಸದಸ್ಯರುಗಳು ಕೂಡಲೇ ಚುನಾವಣೆಯನ್ನು ಮಾಡಬೇಕೆಂದು ಸರದಿಯ ಉಪವಾಸ ಮಾಡುತ್ತಿದ್ದಾರೆ. ಕೆಲವು ಜನರ ಸ್ಥಿತಿ ಈಗಾಗಲೇ ಚಿಂತಾಜನಕವಾಗಿದೆ. ಆದುದರಿಂದ ಸರ್ಕಾರದವರು ಯಾವಾಗ ಅಲ್ಲಿ ಚುನಾವಣೆಯನ್ನು ನಡೆಸುತ್ತಾರೆ. ಎಂಬುದನ್ನು ಹೇಳಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಈ ಹಿಂದೆ ಮಲಪ್ರಭಾ ಸಕ್ಕರೆ ಕಾರ್ಖಾನೆಯ ಚುನಾವಣೆಯನ್ನು ಬೇಗ ಮಾಡುತ್ತೇವೆಂದು ಸರ್ಕಾರದವರು ಇದೇ ವಿಧಾನ ಸಭೆಯಲ್ಲಿ ಈ ಹಿಂದೆ 2 ಸಾರಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆಶ್ವಾಸನೆಯ ಪ್ರಕಾರ ಇದುವರೆಗೂ ಚುನಾವಣೆಯನ್ನು ಮಾಡಲಿಲ್ಲ.. ಇದರಿಂದಾಗಿ ಅಲ್ಲಿ ಷೇರು ಹೋಲ್ಡರ್ಸ್ ಉಪವಾಸ ಕೂತಿದ್ದಾರೆ. ಅವರಲ್ಲಿ ಕೆಲವು ಜನರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಆದುದರಿಂದ ಆ ಸಕ್ಕರೆ ಕಾರ್ಖಾನೆಗೆ ಎಷ್ಟು ದಿವಸದಲ್ಲಿ ಚುನಾವಣೆಯನ್ನು ಮಾಡುತ್ತೀರೆಂದು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಕೇಳಿಬಯಸುತ್ತೇನೆ.

ಶ್ರೀ ಎಸ್.ಆರ್. ಮೋರೆ (ಸಹಕಾರ ಖಾತೆ ಸಚಿವರು) : ಆದಷ್ಟು ಬೇಗ ಚುನಾವಣೆಯನ್ನು ಮಾಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಆದರೆ ಈಗ ಮಳೆಗಾಲ ಆಗಿರುವುದರಿಂದ ಸಾಧ್ಯವಾಗುತ್ತಿಲ್ಲ. ಮಳೆಗಾಲ ಮುಗಿದ ಕೂಡಲೇ ಚುನಾವಣೆಯನ್ನು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ವಿಷಯ : ಫೇರ್‌ಗ್ರೋಥ್ ಫೈನಾನ್ಸಿಯಲ್ ಸರ್ವೀಸಸ್ ಕಂಪೆನಿಯ ಷೇರುಗಳನ್ನು ಪಡೆದಿರುವ ಸಚಿವರು ರಾಜೀನಾಮೆ ನೀಡುವ ಬಗ್ಗೆ ಮಾನ್ಯ ಉಪ ಸಭಾಪತಿಯವರೆ, ನಾನು ಅರ್ಧಕ್ಕೇ ನಿಲ್ಲಿಸಿದ್ದೆ. ಈ ದೇಶದಲ್ಲಿ ನಡೆದಿರಬಹುದಾದ ಸೆಕ್ಯುರಿಟೀಸ್ ಸ್ಕ್ಯಾಂಗೆ ಸಂಬಂಧಪಟ್ಟಿರುವ ಹೇಳುವುದಾದರೆ, ಕೇಂದ್ರದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಅವರ ಮಂತ್ರಿಮಂಡಲದಲ್ಲಿರಬಹುದಾದ ಎಲ್ಲ ಸದಸ್ಯರಿಗೂ ಎಚ್ಚರಿಕೆಯನ್ನು ಕೊಟ್ಟು ಯಾರ್ಯಾರು ಯಾವ ಯಾವ ಕಂಪೆನಿಗಳಲ್ಲಿ ಎಷ್ಟೆಷ್ಟು ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರೆಂಬ ವಿವರಗಳನ್ನು ಕೊಡಬೇಕೆಂದು ಕೇಳಿ ಅದರ ಪ್ರಕಾರ ವಿವರಗಳನ್ನೂ ಕೂಡ ಅವರು ಪಡೆದಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಒಬ್ಬ ಮಂತ್ರಿಯೂ ಕೂಡ ತಮ್ಮ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಅವರು ರಾಜೀನಾಮೆಯನ್ನು ಕೊಡಲು ಕಾರಣವೆಂದರೆ ಬೆಂಗಳೂರಿನಲ್ಲಿರಬಹುದಾದ ಒಂದು ಕಂಪನಿಯಲ್ಲಿ ಅವರು ತಮ್ಮ ಷೇರು ಬಂಡವಾಳವನ್ನು ಹೂಡಿಸಿದ್ದರಿಂದ, ಹಾಗೂ ಈ ಸೆಕ್ಯುರಿಟೀಸ್ ಸ್ಕ್ಯಾಂನಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಅವರು ಮಾರಲ್ ರೆಸ್ಪಾನ್ಸಿಬಿಲಿಟಿಯಿಂದ ತಮ್ಮ ರಾಜೀನಾಮೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಇವತ್ತು ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇವತ್ತು ಫೇರ್‌ಗ್ರೋತ್ ಫೈನಾನ್ಷಿಯಲ್ ಸರ್ವೀಸಸ್ ಎಂದು ಬೆಂಗಳೂರಿನಲ್ಲಿರಬಹುದಾದ ಒಂದು ಕಂಪನಿಯಲ್ಲಿ ಬಹಳ ಜನ ಮಂತ್ರಿಗಳು ಮತ್ತು ಜವಾಬ್ದಾರಿ ಸಾಧನದಲ್ಲಿರಬಹುದಾದ ಅಧಿಕಾರಿಗಳೂ ಕೂಡ ಈ ಕಂಪನಿಯಲ್ಲಿ ತಮ್ಮ ಹಣವನ್ನು ಹೂಡಿಸಿದ್ದಾರೆ. 300–400 ರೂ. ಇದ್ದಂಥ ಕೇರನ್ನು 510 ರೂಗಳಿಗೆ ಕೊಂಡುಕೊಂಡಿದ್ದಾರೆ. ಇವರಿಗೂ ಮತ್ತು ಆ ಕಂಪನಿಯವರಿಗೂ ಒಂದುರೀತಿಯ ಹೊಂದಾಣಿಕೆ ಇದೆ ಎಂದು ಇವತ್ತು ಅತಿಯಾಗಿ ಪ್ರಚಾರವಾಗಿದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಪ್ರಧಾನ ಮಂತ್ರಿಗಳು ಹಾಕಿಕೊಟ್ಟಿರಬಹುದಾದ ನೀತಿಯನ್ನು ಅನುಸರಿಸಿ ನೀವು ಕೂಡ ನಿಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೀರಾ ? ಯಾವ ಯಾವ ಮಂತ್ರಿಗಳು ತಮ್ಮ ಹಣವನ್ನು ಈ ಕಂಪನಿಯಲ್ಲಲ್ಲಿ ಇನ್‌ವೆಸ್ಟ್ ಮಾಡಿದ್ದಾರೆಂಬುದನ್ನು ಧಯವಿಟ್ಟು ತಿಳಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆಯವರೇ, ಪತ್ರಿಕೆಯಲ್ಲಿ ನಾನು ಓದಿರುವಂತೆ ಫೇರ್ ಗ್ರೋತ್ ಫೈನಾನ್ಷಿಯಲ್ ಸರ್ವೀಸಸ್ ಕಂಪನಿ ಎಂಥಲೋ ಏನೋ ಒಂದು